ಪರಿವೀಕ್ಷಿಸಿ ವರದಿಮಾಡಲು ತಿಳಿಸಲಾಗಿತ್ತು. ಮಂಡ್ಯ ಜಿಲ್ಲಾಧಿಕಾರಿಗಳು ದಿನಾಂಕ: 06-1-11 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಆಧರಿಸಿ ಸಧ್ಯಕ್ಕೆ ಸರ್ಕಾರದಿಂದ ತಪ್ಪಿತಸ್ಥರುಗಳಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದೆ. ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ನಗರದ ರಸ್ತೆಗಳ ಸುಂದರೀಕರಣ

23(176): ಶ್ರೀ ಸಿ.ಬಿ.ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೆಬ್ಬಾಳ ಮೇಲುಸೇತುವೆಯಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ರಸ್ತೆಯ ಮಧ್ಯಭಾಗದಲ್ಲಿ ಕೈಗೆತ್ತಿಕೊಂಡಿರುವ ಸುಂದರೀಕರಣ (ಗಿಡ, ಹುಲ್ಲುಹಾಸು, ಗೊಂಬೆಗಳು) ಕಾಮಗಾರಿಗೆ ಕಳೆದ 2 ವರ್ಷಗಳಿಂದ ಈ ವರೆಗೆ ವೆಚ್ಚ ಮಾಡಿರುವ ಹಣವೆಷ್ಟು?

ಆ) ಇದನ್ನು ಒಂದೇ ಕಾಮಗಾರಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಯಾವ ಅವಧಿಯಲ್ಲಿ ಯಾವ ಕಾಮಗಾರಿಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ?

ಈ) ಗಿಡ, ಹುಲ್ಲು, ಇತ್ಯಾದಿಗಳನ್ನು ಎಷ್ಟು ಅವಧಿಗೆ ಕಾಯ್ದುಕೊಳ್ಳಬೇಕಾದ ಜವಾಬ್ದಾರಿ ಗುತ್ತಿಗೆದಾರರ ಮೇಲಿದೆ;

ಉ) ಗುತ್ತಿಗೆ ಷರತ್ತುಗಳ ಪ್ರಕಾರ ನೋಡಿಕೊಳ್ಳಲಾಗಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಮಧ್ಯ ಭಾಗದ ಜಾಗದಲ್ಲಿ ಸೌಂದರ್ಯೀಕರಣಗೊಳಿಸುವ ಕಾಮಗಾರಿಗಳಿಗಾಗಿ (ಗಿಡ, ಹುಲ್ಲುಹಾಸು, ಗೊಂಬೆಗಳು) ಸೇರಿದಂತೆ ಬೋರ್‌ವೆಲ್, ಪೈಪ್‌ಲೈನ್ ಮತ್ತು ಹನಿ ನೀರಾವರಿಗಾಗಿ ಹಾಗೂ ನೀರಿನ ಕಾರಂಜಿ & ಅಲಂಕಾರಿಕ ಶಿಲ್ಪಕಲಾ ಕೃತಿಗಳ ಅಳವಡಿಕೆಗಾಗಿ 2008-09ನೇ ಸಾಲಿನಲ್ಲಿ ಒಟ್ಟು ರೂ.295.36 ಲಕ್ಷಗಳನ್ನು ವೆಚ್ಚ ಮಾಡಿ ಅಭಿವೃದ್ಧಿ ಪಡಿಸಲಾಗಿದೆ.

2009-10ನೇ ಸಾಲಿನಲ್ಲಿ ಇದರ ನಿರ್ವಹಣೆಗಾಗಿ ರೂ. 10.35 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಹಾಗೂ 2010-11ನೇ ಸಾಲಿಗೆ ರೂ. 10.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಆ) ಇಲ್ಲ.

ಇ) 2008–09ನೇ ಸಾಲಿನಲ್ಲಿ ಮೇಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ವಾಹನ ದಟ್ಟಣೆಯ ಜಂಕ್ಷನ್‌ಗಳಲ್ಲಿ ಮೇಲು ಸೇತುವೆ/ಕೆಳ ಸೇತುವೆ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ (Construction of Pass over at Busy Junctions with State Govt. Grants) ಕೈಗೊಳ್ಳಲಾಗಿದೆ. 2009–10ನೇ ಸಾಲಿನಲ್ಲಿ ಸದರಿ ಕಾಮಗಾರಿಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.

ಕೈಗೊಂಡಿರುವ 4 ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ಸೌಂದರ್ಯೀಕರಣ ಕಾಮಗಾರಿ – ಹೆಬ್ಬಾಳ ಮೇಲು ಸೇತುವೆಯಿಂದ ಐ.ಎ.ಎಫ್. ಗೇಟ್‌ವರೆಗೆ.

2. ಸೌಂದರ್ಯೀಕರಣ ಕಾಮಗಾರಿ – ಐ.ಎ.ಎಫ್. ಗೇಟ್‌ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ.

3. ಬೋರ್‌ವೆಲ್ ಪೈಪ್‌ಲೈನ್ ಹಾಗೂ ಹನಿ ನೀರಾವರಿ ಅಳವಡಿಸುವ ಕಾಮಗಾರಿ.

4. ನೀರಿನ ಕಾರಂಜಿ ಹಾಗೂ ಅಲಂಕಾರಿಕ ಶಿಲ್ಪಕಲಾ ಕೃತಿಗಳನ್ನು ಅಳವಡಿಸುವ ಕಾಮಗಾರಿ.

ಈ) ಗುತ್ತಿಗೆ ಷರತ್ತಿನಂತೆ ಗಿಡಗಳು, ಹುಲ್ಲು ಇತ್ಯಾದಿ ತೋಟಗಾರಿಕೆ ಕಾಮಗಾರಿಗಳು ಪೂರ್ಣಗೊಂಡ 60 ದಿನಗಳವರೆಗೆ ಕಾಯ್ದುಕೊಳ್ಳಬೇಕಾದ ಜವಾಬ್ದಾರಿ ಗುತ್ತಿಗೆದಾರರ ಮೇಲಿದೆ.

2009–10ನೇ ಸಾಲಿನಲ್ಲಿ 1 ವರ್ಷದ ಅವಧಿಗೆ ಗಿಡಗಳು, ಹುಲ್ಲು, ಇತ್ಯಾದಿಗಳನ್ನು ನಿರ್ವಹಣೆ ಮಾಡಲು ಗುತ್ತಿದೆ ನೀಡಲಾಗಿದೆ.

ಉ) ಹೌದು.

ತುಮಕೂರು ಜಿಲ್ಲೆಯಲ್ಲಿ ಹೌಸಿಂಗ್ ಬೋರ್ಡ್‌ನ ವತಿಯಿಂದ ಗೃಹ ನಿರ್ಮಾಣಕ್ಕಾಗಿ ಜಮೀನು ವಶಪಡಿಸಿಕೊಂಡಿರುವುದು

24(08): ಶ್ರೀ ಎಂ ಟಿ.ಕೃಷ್ಣಪ್ಪ (ತುರುವೇಕೆರೆ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನಲ್ಲಿ ಹೌಸಿಂಗ್ ಬೋರ್ಡ್ ವತಿಯಿಂದ ಗೃಹ ನಿರ್ಮಾಣಕ್ಕಾಗಿ ಜಮೀನು ವಶಪಡಿಸಿ ಕೊಳ್ಳಲಾಗಿದೆಯೇ?